**ಸಾಕ್ಷಿಗೆ ದಿನಾಂಕಃ09-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. HSN ವಕೀಲರಿಂದ ::**

ಮೃತ 1 ನೇ ಪ್ರತಿವಾದಿ ನನ್ನ ತಾಯಿ ನನ್ನ ತಂದೆಯ ಹೆಸರು ರುದ್ರಪ್ಪ ಆಗಿರುತ್ತದೆ. ನನ್ನ ತಂದೆ ತಾಯಿಗೆ ನಾವುಗಳು 6 ಜನ ಮಕ್ಕಳಿದ್ದು ಅದರಲ್ಲಿ ಒಬ್ಬರು ಮದುವೆಯಾಗದೇ ಮೃತರಾಗಿರುತ್ತಾರೆ. ಅವರ ಪೈಕಿ ಗಂಡು ಮಕ್ಕಳು ಪರಮೇಶ್ವರಪ್ಪ ಮತ್ತು ಮರಳಸಿದ್ದಯ್ಯ ಆಗಿರುತ್ತಾರೆ. ಹೆಣ್ಣು ಮಕ್ಕಳು ಪಾರ್ವತಮ್ಮ, ಶಾಂತಮ್ಮ ಮತ್ತು ಪುಷ್ಪ ಆಗಿರುತ್ತದೆ. ವಾದಿಗಳು ಈ ದಾವೆಯನ್ನು ಯಾವ ಕಾರಣಕ್ಕೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನಗೆ ನೋಟೀಸ್ ಜಾರಿಯಾದ ನಂತರವೂ ಸಹ ಈ ದಾವೆಯನ್ನು ಯಾವ ಕಾರಣಕ್ಕೆ ಹೂಡಿರುತ್ತಾರೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಪಟ್ಟಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿ ನಾವು ತಕರಾರನ್ನು ದಾವಾ ಶೆಡ್ಯೂಲ್ ಸ್ವತ್ತು ಸೇರಿದಂತೆ ಇತರೇ ಒಟ್ಟು ಕುಟುಂಬದ ಆಸ್ತಿಗಳು ವಿಭಾಗಕ್ಕೆ ಬಾಕಿ ಇದ್ದು ಅವುಗಳನ್ನು ವಿಭಾಗ ಮಾಡಿಕೊಂಡುವಂತೆ ಪ್ರತಿದಾವೆ ಸಲ್ಲಿಸಿರುತ್ತೇವೆ. ಈ ದಾವೆಯಲ್ಲಿ ಪ್ರತಿದಾವೆ ಹೂಡುವ ಪೂರ್ವದಲ್ಲಿ ನಾನಾಗಲೀ ಇತರೇ ಪ್ರತಿವಾದಿಯಾಗಲೀ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಿಭಾಗ ಕೋರಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ನನ್ನ ತಂದೆಯ ಜೀವಿತಾ ಅವಧಿಯಲ್ಲಿ ನಮ್ಮ ಕುಟುಂಬದ ಆಸ್ತಿಗಳನ್ನು ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಸರ್ವೇ ನಂಬರ್ 105 ರಲ್ಲಿ 2 ಎಕರೆ 1 ಗುಂಟೆ , ಸರ್ವೇ ನಂಬರ್ 107/5 ರಲ್ಲಿ 1 ಎಕರೆ 6 ಗುಂಟೆ, ಸರ್ವೇ ನಂಬರ್ 25/2 ರಲ್ಲಿ 15 ಗುಂಟೆ, ಸರ್ವೇ ನಂಬರ್ 138 ರಲ್ಲಿ 3 ಗುಂಟೆ ಇರುತ್ತದೆ. 2 ನೇ ಪ್ರತಿವಾದಿ ವಾದ ಪತ್ರದ ಶೆಡ್ಯೂಲ್ ಸ್ವತ್ತಿನ ಪೈಕಿ 1 ಎಕರೆ ಜಮೀನು ಅನ್ನು 1 ನೇ ವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹಿಂದೆ ವಿಭಾಗ ಆಗಿದ್ದು ಖಾತೆ ಸಹ ಹಿಸ್ಸೆದಾರರಾದ ನಮ್ಮಗಳ ಹೆಸರಿಗೆ 25 ವರ್ಷಗಳ ಹಿಂದೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳು ನನ್ನ ತಂದೆಗೆ ಯಾವ ಮೂಲದಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತು ನಾನು ಹೇಳುತ್ತಿರುವಂತೆ ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯೇ ಅವರ ಜೀವಿತಾ ಅವಧಿಯಲ್ಲಿ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಕುಟುಂಬದ ಆಸ್ತಿಗಳನ್ನು ಭಾಗ

ಮಾಡಿಕೊಟ್ಟಿದ್ದರೂ ಸಹ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತನ್ನು ಹಣದ ಅವಶ್ಯಕತೆಗೆ ಒತ್ತೆ ಇಟ್ಟಿರುತ್ತೇವೆಂದು ನಮ್ಮ ತಕರಾರಿನಲ್ಲಿ ತಿಳಿಸಿರುವುದಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: